**ನಾಳೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ  ಎರಡು ಪ್ರಮುಖ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ**

ಬೆಂಗಳೂರು: ನಾಳೆ ಅಂದರೆ 21ನೆಯ ಜೂನ್ 2024ರ ಶುಕ್ರವಾರ  ಸಂಜೆ 5.00 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಸಭಾಂಗಣದಲ್ಲಿ  ಪರಿಷತ್ತಿನ ಎರಡು ಪ್ರಮುಖ ಪ್ರಶಸ್ತಿಗಳಾದ ಕುವೆಂಪು ಸಿರಿಗನ್ನಡ ದತ್ತಿ ಹಾಗೂ ಕನ್ನಡ ಚಳವಳಿ ವೀರಸೇನಾನಿ ಮ.ರಾಮಮೂರ್ತಿ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನವನ್ನು ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವರಾದ ಶ್ರೀ ರಾಮಲಿಂಗ ರೆಡ್ಡಿಯವರು ಮಾಡಲಿದ್ದು  ಹಿರಿಯ ನಿವೃತ್ತ ಪೋಲೀಸ್ ಅಧಿಕಾರಿ  ಶ್ರೀ.ಬಿ.ಕೆ.ಶಿವರಾಂ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ  ನಾಡೋಜ ಡಾ.ಮಹೇಶ ಜೋಶಿಯವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಿ ಅದರ ಹೆಗ್ಗಳಿಕೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ರಾಷ್ಟ್ರಕವಿ ಕುವೆಂಪು ಅವರು 'ಯುಗದ ಕವಿ ಜಗದ ಕವಿ' ಎಂದು ಬೇಂದ್ರೆಯವರಿಂದಲೇ ಕರೆಸಿ ಕೊಂಡವರು. 'ಶ್ರೀರಾಮಾಯಣ ದರ್ಶನಂ' ಮೂಲಕ ಆಧುನಿಕ ಕಾಲಘಟ್ಟದಲ್ಲಿಯೂ ಮಹಾಕಾವ್ಯಗಳು ರೂಪುಗೊಳ್ಳ ಬಹುದು ಎಂದು ತೋರಿಸಿ ಕೊಟ್ಟವರು. ಇವರ ಹೆಸರಿನಲ್ಲಿ  ಸ್ಥಾಪಿತವಾಗಿರುವ ಪ್ರಶಸ್ತಿಯನ್ನು ಕನ್ನಡ ನಾಡು-ನುಡಿ-ಜಲ  ಸೇರಿದಂತೆ ನೆಲಮೂಲದ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದವರಿಗೆ  ನೀಡಲಾಗುತ್ತಿದ್ದು , 2023ನೆಯ ಸಾಲಿನ ಪ್ರಶಸ್ತಿಯನ್ನು ಖ್ಯಾತ ನಿರ್ಮಾಪಕ, ಕನ್ನಡ ಚಳುವಳಿಗಾರ ಸಾ.ರಾ.ಗೋವಿಂದು ಅವರಿಗೆ ನೀಡಲಾಗುತ್ತಿದೆ.

ಕನ್ನಡ ಬಾವುಟದ ನಿರ್ಮಾತೃ ಎಂದೇ ಹೆಸರಾಗಿರುವ ಮ.ರಾಮಮೂರ್ತಿ ಕನ್ನಡ ಚಳುವಳಿಯನ್ನು ಹುಟ್ಟಿ ಬೆಳೆಸಿದ ಮಹನೀಯರು. ತಂದೆ ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಜಾಡನ್ನು ಹಿಡಿದು ಪತ್ರಿಕೋದ್ಯಮದಲ್ಲಿಯೂ ಇದ್ದ ಬರಹಗಾರರೂ ಆಗಿದ್ದ ಅವರ ಅಕಾಲಿಕ ಮರಣ ಕನ್ನಡ ಚಳುವಳಿಗೆ ದೊಡ್ಡ ಹಿನ್ನೆಡೆಯನ್ನು ತಂದಿದ್ದಂತೂ ನಿಜ. ಅವರ ಹೆಸರಿನಲ್ಲಿ 'ವೀರ ಸೇನಾನಿ ಮ.ರಾಮಮೂರ್ತಿ ದತ್ತಿ ಪ್ರಶಸ್ತಿ' ಸ್ಥಾಪಿತವಾಗಿದ್ದು  ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರೂ ಕನ್ನಡ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರೂ ಆದ ಶ್ರೀ ಜೆ.ಹುಚ್ಚಪ್ಪ ಅವರಿಗೆ 2024ನೆಯ ಸಾಲಿನ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಈ ಮಹತ್ವದ ಕಾರ್ಯಕ್ರಮದ ಕುರಿತು ತಮ್ಮ ಪತ್ರಿಕೆಯಲ್ಲಿ ವಿವರಗಳನ್ನು ಪ್ರಕಟಿಸಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಿಕೆ. ಅದರಂತೆ ಕಾರ್ಯಕ್ರಮಕ್ಕೆ ತಮ್ಮ ವರದಿಗಾರರರನ್ನು ಮತ್ತು ಛಾಯಾಗ್ರಾಹಕರನ್ನು ಕಳುಹಿಸಿ ಕಾರ್ಯಕ್ರಮದ ವಿವರಗಳು ಎಲ್ಲರನ್ನೂ ತಲುಪಲು ನೆರವು ನೀಡ ಬೇಕಾಗಿ ಕೋರಿಕೆ.

**ಎನ್.ಎಸ್.ಶ್ರೀಧರ ಮೂರ್ತಿ**

ಸಂಚಾಲಕರು, ಪ್ರಕಟಣಾ ವಿಭಾಗ

ಕನ್ನಡ ಸಾಹಿತ್ಯ ಪರಿಷತ್ತು